ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\9030\2017\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 19/10/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಮೈಸೂರು ಸರಸ್ವತಿಪುರಂ ಡಾ||ಬಿ.ಆರ್.ಅಂಭೇಡ್ಕರ್ ಅಭಿವೃದ್ಧಿ ನಿಗಮದ 1) ತಾಲ್ಲೂಕ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ಭೀಮರಾಯ ವಡ್ಡರ್ ಮತ್ತು 2)ಜಿಲ್ಲಾ ವ್ಯವಸ್ಥಾಪಕರಾದ ಶ್ರೀಮತಿ.ಸಿ.ಆರ್.ಭಾರತಿ ರವರು ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

*********

ಮೈಸೂರು ತಾಲ್ಲೂಕ್ ಜಯಪುರ ಹೋಬಳಿ ತಳೂರು ಗ್ರಾಮದ ನಿವಾಸಿಯಾದ ಶ್ರೀ.ನವೀನ ಬಿನ್ ಕಲ್ಯಾಣಯ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಸರಸ್ವತಿಪುರಂ ಡಾ||ಬಿ.ಆರ್.ಅಂಭೇಡ್ಕರ್ ಅಭಿವೃದ್ಧಿ ನಿಗಮದ 1) ತಾಲ್ಲೂಕ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ಭೀಮರಾಯ ವಡ್ಡರ್ ಮತ್ತು 2) ಜಿಲ್ಲಾ ವ್ಯವಸ್ಥಾಪಕರಾದ ಶ್ರೀಮತಿ.ಸಿ.ಆರ್.ಭಾರತಿ [ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಡಾ||ಬಿ.ಆರ್.ಅಂಭೇಡ್ಕರ್ ನಿಗಮದಲ್ಲಿ ಸಹಾಯ ಧನ ಪಡೆಯಲು ಅರ್ಜಿ ಸಲ್ಲಿಸಿ, 2016ನೇ ವರ್ಷದಲ್ಲಿ ಆಯ್ಕೆಯಾಗಿದ್ದು, 2017ನೇ ಸಾಲಿನಲ್ಲಿ ಉಧ್ಯಮಶೀಲತೆ ಯೋಜನೆಯಡಿ ವಾಹನ ಪಡೆಯಲು ಫಲಾನುಭವಿಯಾಗಿ ಆಯ್ಕೆಯಾಗಿ ಕ್ರಮ ಸಂಖ್ಯೆ.2ರಂತೆ ಪಟ್ಟಿಯಲ್ಲಿ ತಮ್ಮ ಹೆಸರು ಆಯ್ಕೆಯಾಗಿದೆ. ಆದರೆ, ತಳೂರು ಗ್ರಾಮದ ಶ್ರೀ.ಕಾಮಯ್ಯ ಬಿನ್ ಚಿಕ್ಕಜವರಯ್ಯ ರವರು ಟ್ರ್ಯಾಕ್ಟರ್ ಸಾಲ ಪಡೆಯಲು ಅರ್ಹರಿಲ್ಲದಿದ್ದರೂ ಸಹ ಸಹಾಯಧನ ನೀಡಿದ್ದಾರೆ. ಅಲ್ಲದೇ, ಸದರಿ ಶ್ರೀ.ಕಾಮಯ್ಯ ರವರ ತಾಯಿ ಶ್ರೀಮತಿ.ಈರಮ್ಮ ಕೋಂ ಜವರಯ್ಯ ರವರಿಗೆ ದೊಡ್ಡಕಾಟೂರು ಗ್ರಾಮದ ಸರ್ವೆ ನಂ.35ರಲ್ಲಿ ಕೊಳವೆ ಬಾವಿ ಕೊರೆಸಿಕೊಂಡಿದ್ದಾರೆ. ತಾವು ನಿರುದ್ಯೋಗಿಯಾಗಿದ್ದು, ಈ ಬಗ್ಗೆ ತಕರಾರು ಸಲ್ಲಿಸಿದ್ದರೂ

ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ತಮ್ಮ ಬದಲಾಗಿ ಶ್ರೀ.ಕಾಮಯ್ಯ ಬಿನ್ ಚಿಕ್ಕಜವರಯ್ಯ ರವರಿಗೆ ಟ್ರ್ಯಾಕ್ಟರ್ ಪಡೆಯಲು ಸಹಾಯಧನ ನೀಡಿರುವುದಾಗಿ ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

2016–17ನೇ ಸಾಲಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಫಲಾಪೇಕ್ಷಿಯ ಆಯ್ಕೆ ಸಮಿತಿ ಸಭೆಯಲ್ಲಿ ಶಾಸಕರು ಹಾಗೂ ಆಯ್ಕೆ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉಧ್ಯಮಶೀಲತಾ ಅಭಿವೃದ್ಧಿ ಯೋಜನೆಯಡಿ ದೂರುದಾರರನ್ನು ಸಾರಿಗೆ ವಾಹನದ ಉದ್ದೇಶಕ್ಕಾಗಿ ಸಾಲ ಸೌಲಭ್ಯ ಕಲ್ಪಿಸಲು ಆಯ್ಕೆ ಮಾಡಿದ್ದಾರೆ. ಆದರೆ, ದಿ:04/07/17ರಂದು ದೂರುದಾರರ ಬದಲಿಗೆ ಶ್ರೀ.ಕಾಮಯ್ಯ ಬಿನ್ ಚಿಕ್ಕಜವರಯ್ಯ ಎಂಬುವವರನ್ನು ಟ್ರ್ಯಾಕ್ಟರ್ ಖರೀಧಿ ಉದ್ದೇಶಕ್ಕೆ ಆಯ್ಕೆ ಮಾಡಿದೆ. ಅದರಂತೆ, ಕಾವೇರಿ ಗ್ರಾಮೀಣ ಬ್ಯಾಂಕ್, ಉದ್ಬೂರು ಶಾಖೆಗೆ ಸಹಾಯಧನ ಬಿಡುಗಡೆ ಮಾಡಿದೆ. ಸದರಿ ಬದಲಾವಣೆಯನ್ನು ಶಾಸಕರು ಹಾಗೂ ಅಧ್ಯಕ್ಷರು ಆಯ್ಕೆ ಸಮಿತಿ ರವರು ಮಾಡಿರುವುದಾಗಿ ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

2016–17ನೇ ಸಾಲಿನ ಉಧ್ಯಮಶೀಲತಾ ಯೋಜನೆಯಡಿ ಮಾಡಲಾದ ಆಯ್ಕೆ ಪಟ್ಟಿಯಲ್ಲಿ ದೂರುದಾರರು ಕ್ರಮ ಸಂ.2ರಲ್ಲಿ ವಾಹನ ಉದ್ದೇಶಕ್ಕೆ ಆಯ್ಕೆಯಾಗಿರುವುದು ಕಂಡು ಬಂದಿದೆ. ಆ ನಂತರ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು ಹಾಗೂ ಫಲಾನುಭವಿಗಳ ಆಯ್ಕೆ ಸಮಿತಿಯ ಅಧ್ಯಕ್ಷರು ನೀಡಿದ ಪತ್ರದಂತೆ ದೂರುದಾರರನ್ನು ಕೈಬಿಟ್ಟು ಶ್ರೀ.ಕಾಮಯ್ಯ ಬಿನ್ ಚಿಕ್ಕಜವರಯ್ಯ ರವರನ್ನು ಟ್ರ್ಯಾಕ್ಟರ್ ಖರೀದಿಸುವ ಉದ್ದೇಶಕ್ಕಾಗಿ ಆಯ್ಕೆ ಮಾಡಿ, ಹಿಂದಿನ ಆಯ್ಕೆ ಪಟ್ಟಿಯನ್ನು ತಿದ್ದುಪಡಿ ಮಾಡಿರುವುದು ಕಂಡು ಬಂದಿದೆ. ಆದರೆ, ಶ್ರೀ.ಕಾಮಯ್ಯ ಬಿನ್ ಚಿಕ್ಕಜವರಯ್ಯ ರವರನ್ನು ತಮ್ಮ ತಾಯಿಯ ಹೆಸರಿನಲ್ಲಿ ವ್ಯವಸಾಯದ ಜಮೀನು ಮತ್ತು ಕೊಳವೆ ಬಾವಿ ಕೊರೆಸಿ ಆರ್ಥಿಕವಾಗಿ ಸಧೃಡರಾಗಿರುವುದು ಕಂಡು ಬಂದಿದೆ. ಅದೇ ರೀತಿ, ದೂರುದಾರರು ಆರ್ಥಿಕವಾಗಿ ಸಧೃಡರಾಗಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಬದಲಾಗಿ, ಯಾವ ಕಾರಣಗಳಿಂದ ಆಯ್ಕೆ ಪಟ್ಟಿಯಲ್ಲಿ ದೂರುದಾರರ ಹೆಸರನ್ನು ಕೈಬಿಡಲಾಗಿದೆ ಎಂಬ ಸಕಾರಣಗಳನ್ನು ಸಹ ತಿಳಿಸಿಲ್ಲ. ಸದರಿ ಆಯ್ಕೆ ಪಟ್ಟಿಯ ತಿದ್ದುಪಡಿ ಮಾಡುವ ಅಧಿಕಾರ ಮಾನ್ಯ ಅಧ್ಯಕ್ಷರು, ಆಯ್ಕೆ ಸಮಿತಿ

mys/9039/17

ಹಾಗೂ ಶಾಸಕರಿಗೆ ಇರುತ್ತದೆಂದು ಮಾತ್ರ ಹೇಳಿದ್ದಾರೆ, ಆದರೆ ಈ ಬಗ್ಗೆ ಸರ್ಕಾರದ ಸುತ್ತೋಲೆಯನ್ನಾಗಲೀ ಅಥವಾ ಯಾವುದೇ ಸರ್ಕಾರದ ಆದೇಶವಾಗಲೀ ಇಲ್ಲ. ಸದರಿ ಫಲಾನುಭವಿಗಳ ಆಯ್ಕೆ ಪಟ್ಟಿ ತಯಾರಿಸುವ ಸಂದರ್ಭದಲ್ಲಿ ಫಲಾನುಭವಿ ಸದರಿ ಯೋಜನೆಯ ಸಹಾಯಧನ ಪಡೆಯಲು ಅರ್ಹರಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸೂಕ್ತ ತನಿಖೆ ನಡೆಸಿ, ದಾಖಲೆಗಳನ್ನು ಆಯ್ಕೆ ಸಮಿತಿಯ ಮುಂದೆ ಹಾಜರುಪಡಿಸುವುದು ಎದುರುದಾರರ ಕರ್ತವ್ಯವಾಗಿದೆ. ಆದರೆ, ಎದುರುದಾರರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಹಾಗೂ ಯಾವುದೇ ಸಕಾರಣ ಇಲ್ಲದೇ ದೂರುದಾರರನ್ನು ಆಯ್ಕೆ ಪಟ್ಟಿಯಿಂದ ಕೈಬಿಟ್ಟು ಅನರ್ಹ ವ್ಯಕ್ತಿಗೆ ಸೌಲಭ್ಯ ನೀಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

7. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

8. ಅದಲ್ಲದೆ, ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

Sd/-

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

24/10/17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ–2,**
**ಕರ್ನಾಟಕ ರಾಜ್ಯ.**